5. ಮಂಜೂರ್ಮಾಡಲ್ಪಟ್ಟ ದರಖಾಸ್ತುದಾರನು ಮೈಸೂರು ಫಿಡ್ಯಾರ್ಡಿಗೆ ಅಥವಾ ಕಿಲಾನದಿಯ ಥಡಗಳ (ಮೇಲೆ ಗುರ್ತು ಮಾಡಲ್ಪಟ್ಟ) ತೆಪ್ಪದ ಕಡುವಿಗೆ ಜಂಗಲಿನಿಂದ ಸಾಗಿಸಲು ಉದ್ದೇಶಿಸುವ ತಪಾಸು ಚೀಟುಗಳನ್ನೂ ತಯಾರೀ ತಾರೀಖು ಲಾಗಾಯತು 40 ದಿವಸಗಳ ವಳಗಾಗಿ ಮೇಲ್ಕಂಡ ಸ್ಥಳಗಳಿಗೆ ಸಾಗಿಸುವ ಬಗ್ಗೆ ಬದ್ಧವಾಗಿರತಕ್ಕದ್ದು. ಮೈಸೂರು ಫಿಡ್ಯಾರ್ಡಿಗೆ ಅಲ್ಲದೆ ಇತರ ಡಿಪೋಗಳಿಗೆ ರವಾನೇ ಬಗ್ಗೆ ತಯಾರಾಗುವ ಬಿಲ್ಲುಗಳ ಚಾಪೀನೆ ಮತ್ತು ಕೂಂಬುಗಳು ಸಹ ತಯಾರೀ ತಾರೀಖು ಲಾಗಾಯತು 20 ದಿವಸಗಳ ವಳಗೆ ಆಯಾ ಡಿಪೋಗಳಿಗೆ ರವಾನಿಸಲ್ಪಡತಕ್ಕದ್ದು.

6. ಅಂಗೀಕರಿಸಲ್ಪಟ್ಟ ದರಖಾಸ್ತುದಾರನು ತನ್ನ ದರಖಾಸ್ತು ಮಂಜೂರ್ಮಾಡಲ್ಪಟ್ಟ ತರುವಾಯ ಕಾನು ಬರೆದುಕೊಡುವ ಕರಾರು ಮೇರಿಗೆ ಕ್ರಮವಾಗಿ ನಡೆದುಕೊಳ್ಳುವ ಬಗ್ಗೆ ಇಾಮಿರ್ಡ ತರೀಕ್ ಫಾರೆಸ್ಟ್ ವಂದಕ್ಕೆ 200 ರೂಪಾಯಿ ಪ್ರಕಾರ ಡಿಪಾಜಿಟ್ ಕಟ್ಟುತಕ್ಕದ್ದು. ಮೇಲ್ಕಂಡ ಪರತ್ತುಗಳ ಮೇರೆ ನಡೆಯಲು ತಪ್ಪಿದಲ್ಲಿ ಠೇವಣೀ ಠೊಬಲಗನ್ನು ಸರಕಾರಕ್ಕೆ ಜಪ್ತಿಸಿಕೊಳ್ಳಲ್ಪಡುವದು.

7. ಬ್ಯಾಪಿಗೇ ಕಾಲದಲ್ಲಿ ಡಿಸ್ಟ್ರಿಕ್ಟ್ ಫಾರೆಸ್ಟ್ ಅಫಿಸರವರಿಂದ ಮಾಡಲ್ಪಡುವ ಕಾಯಿದೆ ಕಾರ್ಯಗಳಂತೆ ನಡಿಯಲು ಕಂಟ್ರಾಕ್ಟುದಾರನು ಬದ್ಧನಾಗಿರುವನು.

8. ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರವರು ಕಮ್ಮಿ ದರದ ಅಥವಾ ಇತರ ಯಾವ ದರಖಾಸ್ತುಗಳನ್ನೂ ಅಂಗೀಕರಿಸುವದಕ್ಕೆ ಬದ್ಧರಾಗಿರುವದಿಲ್ಲ. ಮತ್ತು ಅಂಥಾ ಅಂಗೀಕಾರವು ಫಾರೆಸ್ಟ್ ಇನ್ಸ್‌ಪೆಕ್ಟರ್ ಜನರಲ್ ಸಾಹೆಬರವರ ಮಂಜೂರಾತಿಗೆ ವಳಪಟ್ಟು ಇರುತ್ತೆ.

9. ಸಾಮಾನುಗಳು ಸಾಗಿಸುವದಕ್ಕೆ ಗಾಡೀ ರಸ್ತೆ ವಗೈರೇ ದಾರಿಗಳನ್ನು ಮಾಡಿಕೊಡಲು ಸರ್ಕಾರದವರು ಬದ್ಧರಾಗಿಲ್ಲವಾದ ಸಬಬು ಉದ್ದೇಶಿಸುವ ಕಂಟ್ರಾಕ್ಟುದಾರನೇ ಅತನ ಹಾತ ಲಾಗವಡಿನಿಂದ ತಕ್ಕ ಏರ್ಪಾಡುಗಳು ಮಾಡಿಕೊಳ್ಳತಕ್ಕದ್ದು. ಮರಗಳನ್ನು ಸಾಗಿಸದೇ ಇರುವ ಪಕ್ಷ ಯಾವ ಸಬಬುಗಳನ್ನೂ ಅಂಗೀಕರಿಸಲಾರೆವು.

10. ಉದ್ದೇಶಿಸುವ ಕಂಟ್ರಾಕ್ಟುದಾರರು ಅಪೇಕ್ಷಿಸುವ ಇತರ ಜಾಸ್ತೀ ಸಂಗತಿಗಳನ್ನು ಮೈಸೂರು ಡಿಸ್ಟ್ರಿಕ್ಟು ಫಾರೆಸ್ಟು ಆಫಿಸಿನಲ್ಲಿ ವಿಚಾರಿಸಿ ತಿಳಿದುಕೊಳ್ಳಬಹುದು.

ಟಿ. ಅಬ್ದುಲ್‌ಕರೀಮ್,
ಡಿಸ್ಟ್ರಿಕ್ಟು ಫಾರೆಸ್ಟ್ ಆಫಿಸರ್.

ಹಾಸನ ಡಿಸ್ಟ್ರಿಕ್ಟು.

ತಾರೀಖು 24ನೇ ಜುಲೈ 1896.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಸ್ರ 1896—97ನೇ ಸಾಲಿಗೆ ಹಾಸನ ತಾಲ್ಲೂಕಿನಲ್ಲಿರುವ ಕುರಂಗದ ಕಲ್ಲು ಜಮಾಯಿಸತಕ್ಕ ಹಕ್ಕನ್ನ ಹಾಸನ ತಾಲ್ಲೂಕು ಕಛೇರಿಯಲ್ಲಿ ಬರುವ ಸೆಪ್ಟಂಬರ್ 7ನೇ ತಾರೀಖಿನ ಬೆಳಿಗ್ಯೆ 11 ಘಂಟೆಗೆ ಹರಾಜು ಮೂಲಕ ವಿಕ್ರಯಿಸಲ್ಪಡತ್ತೆ.

2. ಅಮಲ್ದಾರು ಅಥವಾ ಶರಸ್ತೇದಾರು ಹರಾಜು ಮಾಡಿಸುತ್ತಾರೆ.

3. ಚಡಸವಾಲ್ ಅಂಗೀಕರಿಸತಕ್ಕದ್ದು ಹಾಸನ ಡಿಸ್ಟ್ರಿಕ್ಟು ಜೆಪ್ಯುಟಿ ಕಮ್ಮಿಷನರ್ ಸಾಹೇಬರವರ ಮಂಜೂರಾತಿಗೆ ವಳಪಟ್ಟಿರುತ್ತೆ.

4. ಹರಾಜು ಕಾಲದಲ್ಲಿ ಸವಾಲ್ ಮಾಡತಕ್ಕವರು ತಮ್ಮ ಸ್ವಂತಕ್ಕೋಸ್ಕರ ಸವಾಲ್ ಮಾಡುತ್ತಾರೋ ಅಥವಾ ಏಜಂಟರಾಗಿ ಸವಾಲ್ ಮಾಡುತ್ತಾರೋ ಆ ಸಂಗತಿಯನ್ನ ತಿಳಿಸಬೇಕು. ಏಜಂಟರಾಗಿ ಸವಾಲ್ ಮಾಡುವದಾದರೆ ತಾವು ಯಾರಿಗೋಸ್ಕರ ಸವಾಲ್ ಮಾಡುತ್ತಾರೋ ಅವರಿಂದ ಪಡದಿರುವ ಅಧಿಕಾರ ಪತ್ರಿಕೆಯನ್ನ ಹಾಜರ್ ಮಾಡಬೇಕು. ಹಾಗೆ ಮಾಡಲು ತಪ್ಪಿದರೆ ಅವರ ಸವಾಲ್ ತಿರಸ್ಕರಿಸಲ್ಪಡುತ್ತೆ.

5. ಚಡಸವಾಲ್‌ದಾರು ಹರಾಜು ಕಾಲದಲ್ಲಿ ತಮ್ಮ ಸವಾಲ್ ಮೊಬಲಗು ಪೈಕಿ ಶೇಕಡಾ 25 ರೂಪಾಯಿಗಳ ಮೇರಿಗೆ ಡಿಪಾಜಿಟ್ ಮೊಬಲಗು ಹಾಜರ್ ಮಾಡಬೇಕಲ್ಲದೆ ಹರಾಜು ಮಂಜೂರ್ ಮಾಡಲ್ಪಟ್ಟ ಸಂಗತಿ ಅಮಲ್ದಾರ್‌ರಿಂದ ಚಡಸವಾಲ್‌ದಾರ್‌ರಿಗೆ ತಿಳಿಸಲ್ಪಟ್ಟ ತಾರೀಖು ಲಾಗಾಯತು 7 ದಿವಸಗಳೊಳಗಾಗಿ ಚಡಸವಾಲ್ ಮೊಬಲಗಿನ ಮೇಲೆ ರೂಪಾಯಿ ಬಂದಕ್ಕೆ ಬಂದು ಆಣೆಯಂತೆ ಆಗುವ ಲೋಕಲ್ ಸೆಸ್ಸ್ ದೇಖೀಲ್ ಚಡಸವಾಲ್ ಮೊಬಲಗನ್ನು ಪಾವತಿ ಮಾಡದಿದ್ದರೆ ಹಾಗೆ ಇಟ್ಟ ಡಿಪಾಜಿಟ್ ಮೊಬಲಗು ಸರ್ಕಾರಕ್ಕೆ ದಂಡವಾಗಿ ತೆಗದುಕೊಳ್ಳಲ್ಪಡುವದು.

6. ಇಜಾರೆದಾರು ಹಿಡುವಳಿ ಜಮೀನ್‌ಗಳಲ್ಲಿ ಇರತಕ್ಕ ಕುರಂಗದ ಕಲ್ಲುಗಳನ್ನ ಆಯಾ ಹಿಡುವಳಿದಾರ್ರ ಅನುಮತಿ ವಿನಹ ಆರಿಸಿಕೊಳ್ಳಕೂಡದು. ಮತ್ತು ಹಿಡುವಳಿದಾರು ತಮ್ಮ ಜಮೀನುಗಳಲ್ಲಿರತಕ್ಕ ಕುರಂಗದ ಕಲ್ಲುಗಳನ್ನ ತಾವೇ ಆರಿಸಿಕೊಳ್ಳಕೂಡದು. ಅಥವಾ ಇಜಾರೆದಾರು ವಿನಹ ಇತರರಿಗೆ ಮಾರಲೂ ಕೂಡದು.

7. ಇಜಾರೆದಾರರು ಹುಲ್ಲುಬನ್ನಿಯ ಯಾ ಹುಲ್ಲುಗಾವಲ್ ಇಜಾರೆದಾರ್ರ ಹಕ್ಕಿಗೆ ಆತಂಕ ಪಡಿಸಕೂಡದು.

8. ಹಿಡುವಳಿಯಲ್ಲಿ ಇಲ್ಲದ ಜಮೀನ್‌ಗಳನ್ನ ಸರಕಾರದವರು ಸಾಗುವಳಿಗೆ ಕೊಡತಕ್ಕ ವಿಷಯದಲ್ಲಿ ಇಜಾರೆದಾರ್ರ ಅಭ್ಯಂತರ ವೇನೂ ಯಿರುವದಿಲ್ಲ. ಸದರಿಂತು ಅಂಥಾ ಜಮೀನ್‌ಗಳಲ್ಲಿ ಶಿಕ್ಕುವ ಕುರಂಗದ ಕಲ್ಲುಗಳನ್ನ ತೆಗದುಕೊಳ್ಳಲು ಅವರಿಗೆ ಹಕ್ಕು ಯಿರುತ್ತೆ.

9. ಕಲ್ಲುಗಳನ್ನ ಜಮಾಯಿಸುವದಕ್ಕಾಗಿ ಜಮೀನ್‌ಗಳನ್ನ ಇಜಾರೆದಾರ್ರು ಅಗಿಯಕೂಡದು. ಬಂದು ವೇಳೆ ಅಗಿದರೂ ಸಾಗುವಳಿಗೆ ಅನುಕೂಲಿಸುವ ಹಾಗೆ ಗುಣಿಗಳನ್ನ ಮುಚ್ಚಿ ಸರಿಪಡಿಸಬೇಕು.

10. ಕಲ್ಲುಗಳು ಜಮಾಯಿಸಲ್ಪಟ್ಟ ಗ್ರಾಮ, ಇಷ್ಟುಮಣ ಕಲ್ಲುಗಳು, ಮತ್ತು ಅದು ರವ್ಹಾಗತಕ್ಕ ಸ್ಥಳ ಈ ತಪ್ಸೀಲ್‌ಗಳು ನಮೂದು ಕಂಡು ತಾಲ್ಲೂಕು ಅಮಲ್ದಾರ್‌ರಿಂದ ಬಂದು ಮಾಫೀ ಲೈಸೆನ್ಸನ್ನು ಪಡೆಯದೆ ಕಲ್ಲುಗಳನ್ನ ಇಜಾರೆದಾರ್ರು ಸಾಗಿಸ ಕೂಡದು.

ಎ. ಕೃಷ್ಣಸ್ವಾಮಯ್ಯಂಗಾರ್,
ಜೆಪ್ಯುಟಿ ಕಮ್ಮಿಷನರ್.

ನೋಟಿಸ್.

ತಾರೀಖು 26ನೇ ಆಗಸ್ಟ್ 1896.

ಗೆಜೆಟ್ ಚಂದಾದಾರರು ಚಂದಾ ಹಣವನ್ನು ಪೋಸ್ಟ್‌ಆಫಿಸ್ ಮನಿಆರ್ಡರ್ ಮೂಲಕ ಕಳುಹಿಸುತ್ತಾ ಅವರ ಹೆಸರು ಸರಿಯಾದ ವಿಳಾಸ ಮುಂತಾದ ತಪ್ಸೀಲ್ ತಿಳಿಸದೇಲೂ ಮತ್ತು ರಿಕಾರ್ಡಿನಲ್ಲಿ ಯಿಡುವದಕ್ಕೆ ವಿಶೇಷ ಅನನುಕೂಲವಾಗಿರುವಂಥಾ ಕೂಪನ್‌ಗಳ